ದಿ: 17.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 5 ರಿಂದ 7ನೇ ಪ್ರತಿವಾದಿ ಪರ ಶ್ರೀ ಎ.ಎನ್. ವಕೀಲರಿಂದ:-**

1. ನಾನು 1958ರಲ್ಲಿ ಜನಿಸಿರುತ್ತೇನೆ. ನಿ.ಪಿ.2 ಗ್ರಾಂಟ್ ಆಗುವ ಸಮಯ ನನಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಿ.ಪಿ.2 ಗ್ರಾಂಟ್ ಆದೇಶ ಸಿದ್ಧರಾಮಣ್ಣ ಎನ್ನುವವರ ಹೆಸರಿಗೆ ಆಗಿರುತ್ತದೆ. ಆತ ನನ್ನ ದೊಡ್ಡಪ್ಪ. ಸದರಿ ಗ್ರಾಂಟ್ ನ ಸಂಗತಿಗಳು ನನಗೆ ತಿಳಿದಿರುತ್ತದೆ. ನನ್ನ ದೊಡ್ಡಪ್ಪ ಗ್ರಾಂಟ್ ಕೋರಿ ಅರ್ಜಿಯನ್ನು ಯಾರ ವಿರುದ್ಧ ಸಲ್ಲಿಸಿದ್ದರು ಎಂದು ನನಗೆ ತಿಳಿದಿಲ್ಲ. ಆ ಬಗ್ಗೆ ನಾನು ನನ್ನ ದೊಡ್ಡಪ್ಪನನ್ನು ವಿಚಾರಿಸಿರುವುದಿಲ್ಲ. ಸದರಿ ಗ್ರಾಂಟ್ ನ ಸಂಗತಿ ನನಗೆ 2013-14ರ ಪೂರ್ವದಲ್ಲಿಯೇ ತಿಳಿದಿತ್ತು. 1994ರಲ್ಲಿ ನಮ್ಮ ಕುಟುಂಬದಲ್ಲಿ ಡಿಕ್ರಿಯಾದ ಸಮಯ ಗ್ರಾಂಟ್ ನ ಸಂಗತಿ ನನಗೆ ತಿಳಿಯಿತು. ಆ ಸಮಯ ನನ್ನ ದೊಡ್ಡಪ್ಪನ ಮಕ್ಕಳು ಹಾಗೂ ನಮ್ಮ ನಡುವೆ ನ್ಯಾಯಾಲಯದ ಡಿಕ್ರಿ ಮೂಲಕ ವಿಭಾಗ ಆಗಿರುತ್ತದೆ. ಸದರಿ ಡಿಕ್ರಿಯಂತೆ ನಿ.ಪಿ.11ರ ಬಿ ಅನುಸೂಚಿಯ ಸ್ವತ್ತುಗಳು ನಮ್ಮ ಪಾಲಿಗೆ ಬಂದಿರುತ್ತವೆ. ಸದರಿ ಡಿಕ್ರಿಯಂತೆ ನನ್ನ ಹಾಗೂ ನನ್ನ ಸಹೋದರನ ಪಾಲಿಗೆ ಒಟ್ಟು 7 ಗುಂಟೆ ಜಮೀನು ಬಂದಿರುತ್ತದೆ. ನಿ.ಪಿ.11ರ ಪುಟ-7ರಲ್ಲಿ ಸರ್ವೆ ನಂ.165/2 ಹಾಗೂ 166/3ರ ಜಮೀನಿಗೆ ಚೆಕ್ಕುಬಂದಿಯನ್ನು ನಮೂದಿಸಿಲ್ಲ ಎಂದರೆ ಸರಿ ಹಾಗೂ ಅದರ ಒಟ್ಟು ವಿಸ್ತೀರ್ಣವನ್ನು ಒಟ್ಟು 14 ಗುಂಟೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ನಮಗೆ ಸೇರದೆ ಇದ್ದರೂ ಪ್ರತಿವಾದಿಯರಿಗೆ ಮೋಸ ಮಾಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಕುಟುಂಬದ ವಂಶವೃಕ್ಷದ ಬಗ್ಗೆ ನನಗೆ ತಿಳಿದಿರುತ್ತದೆ. ಪ್ರತಿವಾದಿಯರ ತಂದೆಯ ಹೆಸರು ರುದ್ರಪ್ಪ. ಸದರಿ ರುದ್ರಪ್ಪರವರ ತಂದೆಯ ಹೆಸರು ನನಗೆ ತಿಳಿದಿಲ್ಲ. ಸದರಿ ರುದ್ರಪ್ಪನ ತಂದೆಯ ಹೆಸರು ಶಿವಪ್ಪ ಎಂದರೆ ಸರಿ. ಸದರಿ ಶಿವಪ್ಪರವರು 1930ರಲ್ಲಿ ಸರ್ವೆ ನಂ.165ರಲ್ಲಿ ಒಟ್ಟು 3 ಎಕರೆ 7 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಆ ಪೈಕಿ 30 ಗುಂಟೆ ಜಮೀನನ್ನು ಸದರಿ ಶಿವಪ್ಪನ ವಾರಸ್ದಾರರು 1947ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ, ಸಾಕ್ಷಿ ಮುಂದುವರೆದು, ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖಾತೆ ಪ್ರತಿವಾದಿಯರ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು 2012-13 ರಲ್ಲಿ ಪ್ರತಿವಾದಿಯರು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ತಮ್ಮ ಹೆಸರನ್ನು ಪಹಣಿಯಲ್ಲಿ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ.

2. ನನ್ನ ಅಕ್ಕ ಹಾಗೂ ನನ್ನ ಮೊಮ್ಮಗಳು ನನ್ನ ವಿರುದ್ಧ ವಿಭಾಗ ಕೋರಿ ಓ.ಎಸ್.ನಂ.:772/2013 ಹಾಗೂ 799/2014 ರಂತೆ ದಾವೆಗಳನ್ನು ಹೂಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಸದರಿ ದಾವೆಗಳಲ್ಲಿ ದಾವಾ ಸ್ವತ್ತನ್ನು ಸೇರಿಸಿರುವುದಿಲ್ಲ ಎಂದರೆ ನನಗೆ ತಿಳಿದಿಲ್ಲ. ದಾವಾ ಸ್ವತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ ಕಾರಣ ಅದನ್ನು ಸದರಿ ದಾವೆಗಳಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ದೊಡ್ಡಪ್ಪನ ಪರ ಆದ ಇನಾಮ್ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯರು ಕೆ.ಎ.ಟಿ. ಎದುರು ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ಸದರಿ ಅಪೀಲಿನಲ್ಲಿ ನಾನು ಪಕ್ಷಗಾರನಾಗಿದ್ದು ವಕೀಲರ ಮೂಲಕ ಹಾಜರಾಗಿದ್ದೆನು ಎಂದರೆ ನನಗೆ ತಿಳಿದಿಲ್ಲ.

4. 2013ರಲ್ಲಿ ಪ್ರತಿವಾದಿಯರ ನಡುವೆ ಓ.ಎಸ್.ನಂ.:17/2013 ದಾವೆಯಲ್ಲಿ ನ್ಯಾಯಾಲಯದ ಡಿಕ್ರಿ ಮೂಲಕ ದಾವಾ ಸ್ವತ್ತು ಒಳಗೊಂಡಂತೆ ಅವರ ಕುಟುಂಬದ ಸ್ವತ್ತುಗಳ ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಡಿಕ್ರಿಯನ್ನು ಪ್ರಶ್ನಿಸಿ ನಾನು ಅಪೀಲು ಸಲ್ಲಿಸಿರುತ್ತೇನೆ. ಆ ರೀತಿ ನಾನು ಯಾವುದೇ ಅಪೀಲು ಸಲ್ಲಿಸದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೃತ ಶಿವಪ್ಪನ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಆತನ ಕುಟುಂಬಸ್ಥರನ್ನು ಪಕ್ಷಗಾರರನ್ನಾಗಿ ತೋರಿಸದೆ ಮೋಸದಿಂದ ಗ್ರಾಂಟ್ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೆ ಇದ್ದರೂ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**